# ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
# ADIKAVI SRI MAHARSHI VALMIKI UNIVERSITY, RAICHUR

Krishna Tunga Campus, Mantralay Road(N.H. 167),Yergera -584133, Raichur, Karnataka

**ಪರೀಕ್ಷಾ ವಿಭಾಗ**

Email: registrarevrur@gmail.com


ಕ್ರ.ಸಂ: ಆಶ್ರೀಮವಾವಿರಾ/ಪರೀಕ್ಷಾ/ಯು.ಜಿ/2025-26/596 ದಿನಾಂಕ: 10.11.2025

## ಸುತ್ತೋಲೆ

**ವಿಷಯ:**ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸುವ ಕುರಿತು.

*****

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡುವ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಎಲ್ಲಾ ಪದವಿ ಕಾಲೇಜಿನ ಪ್ರಾಧ್ಯಾಪಕರುಗಳಿಗೆ ತಿಳಿಯಪಡಿಸುವುದೇನೆಂದರೆ, ತಮ್ಮ ಕಾಲೇಜಿನಿಂದ ಸಲ್ಲಿಸಿರುವ ಮತ್ತು ವಿಶ್ವವಿದ್ಯಾನಿಲಯದ ಡೇಟಾಬೇಸ್‌ನಲ್ಲಿ ನಮೂದಾಗಿರುವ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ಗೂಗಲ್ ಶೀಟ್‌ನಲ್ಲಿ ನೀಡಲಾಗಿದೆ. ಪ್ರಾಧ್ಯಾಪಕರುಗಳ ಪಟ್ಟಿಯನ್ನು ಪರಿಶೀಲಿಸಿ, ಯಾವುದಾದರು ಮಾಹಿತಿ ತಪ್ಪಿದಲ್ಲಿ ಅಥವಾ ಬದಲಾವಣೆ ಇದ್ದಲ್ಲಿ ಅಥವಾ ಸೇರ್ಪಡೆ ಇದ್ದಲ್ಲಿ ಅಥವಾ ವರ್ಗಾವಣೆಯಾದ ಪ್ರಾಧ್ಯಾಪಕರುಗಳ ಮಾಹಿತಿಯನ್ನು ಪ್ರಾಂಶುಪಾಲರುಗಳ ಇ-ಮೇಲ್‌ಗೆ ಕಳುಹಿಸಿದ ಗೂಗಲ್ ಶೀಟ್‌ನಲ್ಲಿರುವ ಪಟ್ಟಿಯನ್ನು ದಿನಾಂಕ 13.11.2025ರೊಳಗೆ ನವೀಕರಿಸಿ ಇ-ಮೇಲ್ ಮುಖಾಂತರ Approved List ಎಂದು ನಮೂದಿಸಿ ಕಳುಹಿಸಿ ಕೊಡಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

**ಸೂಚನೆಗಳು:**

1. ಪಟ್ಟಿಯನ್ನು ನವೀಕರಿಸಿ Approved List ಎಂದು ನಮೂದಿಸಿ ಇ-ಮೇಲ್ ಮುಖಾಂತರ ಕಳುಹಿಸತಕ್ಕದ್ದು.
2. ನಿಗದಿತ ದಿನಾಂಕದೊಳಗೆ ಸಲ್ಲಿಸಿದ ಪ್ರಾಧ್ಯಾಪಕರುಗಳ ಪಟ್ಟಿಯನ್ನು ಮಾತ್ರ ವಿಶ್ವವಿದ್ಯಾಲಯ ಪರಿಗಣನೆಗೆ ತೆಗೆದುಕೊಳ್ಳುವುದು.
3. Approved List ನಲ್ಲಿರುವ ಪ್ರಾಧ್ಯಾಪಕರುಗಳನ್ನು ಮಾತ್ರ ವಿಶ್ವವಿದ್ಯಾಲಯ ಪರೀಕ್ಷಾ ಕಾರ್ಯಗಳಿಗೆ ಜೇಷ್ಠತಾ ಆಧಾರದ ಮೇಲೆ ನಿಯೋಜಿಸಲಾಗುವುದು.
4. ತಪ್ಪಾದ ಮಾಹಿತಿಯನ್ನು ಒದಗಿಸಿರುವ ಸಂದರ್ಭದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿದ್ದು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.
5. ನಿಗದಿತ ದಿನಾಂಕ ಮುಗಿದ ನಂತರ ಗೂಗಲ್ ಶೀಟ್‌ನ ಸ್ವೀಕೃತಿಯನ್ನು ಸ್ಥಗಿತಗೊಳಿಸಲಾಗುವುದು.

10/11/25

ಕುಲಸಚಿವರು (ಮೌಲ್ಯಮಾಪನ)

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

10/11/25

ಪ್ರತಿಗಳು:

1. ಮಾನ್ಯ ಕುಲಪತಿಗಳು ಆಪ್ತ ಕಾರ್ಯದರ್ಶಿಗಳು/ ಮಾನ್ಯ ಕುಲಸಚಿವರ ಆಪ್ತ ಸಹಾಯಕ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು ಮಾಹಿತಿಗಾಗಿ.
2. ಕಚೇರಿ ಪ್ರತಿ.